# ಯಾರು ಸಂತೃಪ್ತನಾದನೋ ಅವನು ಈಮಾನ್‌ನ ರುಚಿಯನ್ನು ಆಸ್ವಾದಿಸಿದನು

ذاق طعم الإيمان من رضي بالله ربا وبالإسلام دينا وبمحمد صلى الله عليه وسلم نبياً

< الكنادي >

ಇಮಾಮ್ ಇಬ್ನುಲ್ ಕಯ್ಯಿಮ್ ಅಲ್‌ಜೌಝಿಯ್ಯಃ

الإمام ابن القيم الجوزية

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಅಬೂಬಕರ್ ನಝೀರ್ ಸಲಫಿ

ترجمة: محمد حمزة البتوري

مراجعة: أبو بكر نذير السلفي

# ಯಾರು ಸಂತೃಪ್ತನಾದನೋ ಅವನು ಈಮಾನ್‌ನ ರುಚಿಯನ್ನು ಆಸ್ವಾದಿಸಿದನು

ಪ್ರವಾದಿ(ﷺ)ರವರು ಹೇಳಿದರು:

قال رَسُول اللَّهِ ﷺ: { ذَاقَ طَعْمَ الْإِيمَانِ مَنْ رَضِيَ بِاللَّهِ رَبًّا وَبِالْإِسْلَامِ دِينًا وَبِمُحَمَّدٍ رَسُولًا } رواه مسلم.

"ಯಾರು ಅಲ್ಲಾಹನನ್ನು ರಬ್ಬ್ ಆಗಿ, ಇಸ್ಲಾಮನ್ನು ದೀನ್ ಆಗಿ ಮತ್ತು ಮುಹಮ್ಮದ್ (ﷺ)ರವರನ್ನು ರಸೂಲ್ ಆಗಿ ತೃಪ್ತಿಪಡುವನೋ ಅವನು ಈಮಾನ್‌ನ ರುಚಿಯನ್ನು ಅಸ್ವಾದಿಸುವನು." [ಸಹೀಹ್ ಮುಸ್ಲಿಮ್]

ಪ್ರವಾದಿ(ﷺ)ರವರು ಹೇಳಿದರು:

قال رَسُول اللَّهِ ﷺ: { مَنْ قَالَ حِينَ يَسْمَعُ النِّدَاءَ رَضِيتُ بِاللَّهِ رَبًّا وَبِمُحَمَّدٍ رَسُولًا وَبِالْإِسْلَامِ دِينًا، غُفِرَ لَهُ ذَنْبُهُ } رواه مسلم.

"ಯಾರು ಅದಾನ್ ಆಲಿಸುವಾಗ ನಾನು ಅಲ್ಲಾಹನನ್ನು ರಬ್ಬ್ ಆಗಿ, ಮುಹಮ್ಮದ್ (ﷺ)ರವರನ್ನು ರಸೂಲ್ ಆಗಿ ಮತ್ತು ಇಸ್ಲಾಮನ್ನು ದೀನ್ ಆಗಿ ತೃಪ್ತಿಪಟ್ಟಿರುವೆನು ಎಂದು ಹೇಳುತ್ತಾನೋ ಅವನಿಗೆ ಅವನ ಪಾಪಗಳನ್ನು ಕ್ಷಮಿಸಿಬಿಡಲಾಗುವುದು." [ಸಹೀಹ್ ಮುಸ್ಲಿಮ್]

ಧರ್ಮದ ಅಸ್ತಿತ್ವವಿರುವುದು ಈ ಎರಡು ಹದೀಸ್‌ಗಳ ಮೇಲೆ ಮತ್ತು ಧರ್ಮವು ಇವೆರಡರ ಕಡೆಗೇ ಕೊನೆಗೊಳ್ಳುತ್ತದೆ. ಈ ಎರಡು ಹದೀಸ್‌ಗಳು ಅಲ್ಲಾಹನ ರುಬೂಬಿಯ್ಯತ್ ಮತ್ತು ಉಲೂಹಿಯ್ಯತ್‌ನಲ್ಲಿರುವ ಸಂತೃಪ್ತಿಯನ್ನು ಹೊಂದಿದೆ. ಅವನ ರಸೂಲ್(ﷺ)ರವರಲ್ಲಿರುವ ಮತ್ತು ಅವರನ್ನು ಅನುಸರಿಸುವುದರಲ್ಲಿರುವ ಸಂತೃಪ್ತಿಯನ್ನು ಹೊಂದಿದೆ. ಅವನ ದೀನ್‌ನಲ್ಲಿರುವ ಮತ್ತು ಅದಕ್ಕೆ ಶರಣಾಗುವುದರಲ್ಲಿರುವ ಸಂತೃಪ್ತಿಯನ್ನು ಹೊಂದಿದೆ. ಈ ನಾಲ್ಕು ವಿಷಯಗಳು ಯಾರಲ್ಲಿ ಒಟ್ಟುಗೂಡುತ್ತದೋ ಅವನು ನಿಜವಾಗಿಯೂ ಸಿದ್ದೀಕ್ ಆಗಿದ್ದಾನೆ.

ನಾನು ಅಲ್ಲಾಹನನ್ನು ರಬ್ಬ್ ಆಗಿ, ಮುಹಮ್ಮದ್(ﷺ)ರವರನ್ನು ರಸೂಲ್ ಆಗಿ ಮತ್ತು ಇಸ್ಲಾಮನ್ನು ದೀನ್ ಆಗಿ ತೃಪ್ತಿಪಟ್ಟಿದ್ದೇನೆ ಎಂದು ಘೋಷಿಸುವುದು ಬಹಳ ಸುಲಭ. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಮತ್ತು ಪರೀಕ್ಷೆಗಳ ಸಂದರ್ಭದಲ್ಲಿ ಅದನ್ನು ಈಡೇರಿಸುವುದು ಅತ್ಯಂತ ಕಷ್ಟ. ವಿಶೇಷವಾಗಿ ತನ್ನ ಮನದಿಂಗಿತ ಮತ್ತು ಬಯಕೆಗಳು ಇವುಗಳಿಗೆ ವಿರುದ್ಧವಾಗಿ ಬರುವ ಸಂದರ್ಭಗಳಲ್ಲಿ! ಅಂತಹ ಸಂದರ್ಭಗಳಲ್ಲಿ ನಾಲಗೆಯ ಮೂಲಕ ನಾನು ತೃಪ್ತಿಪಟ್ಟಿದ್ದೇನೆ ಎನ್ನುತ್ತಿದ್ದವನ ವರ್ತನೆಯು ಅವನ ನಾಲಗೆಯು ಹೇಳುತ್ತಿದ್ದುದಕ್ಕೆ ವಿರುದ್ಧವಾಗಿ ಪರಿಣಮಿಸುವುದು.

ಅಲ್ಲಾಹನ ಇಲಾಹಿಯ್ಯತ್ತಿನಲ್ಲಿರುವ ತೃಪ್ತಿಯು ಅವನನ್ನು ಮಾತ್ರ ಪ್ರೀತಿಸುವುದನ್ನು, ಅವನನ್ನು ಮಾತ್ರ ಭಯಪಡುವುದನ್ನು, ಅವನಲ್ಲಿ ಮಾತ್ರ ನಿರೀಕ್ಷೆಯಿಡುವುದನ್ನು, ಅವನೆಡೆಗೆ ಮಾತ್ರ ಮರಳುವುದನ್ನು, ಅವನಿಗೆ ಮಾತ್ರ ವಿಧೇಯತೆ ತೋರುವುದನ್ನು, ಬಯಕೆ ಮತ್ತು ಪ್ರೀತಿಯ ಎಲ್ಲ ತೀವ್ರತೆಗಳನ್ನು ಅವನೆಡೆಗೆ ಮಾತ್ರ ಕೊಂಡೊಯ್ಯುವಂತೆ ಮಾಡುವುದನ್ನು ಒಳಗೊಂಡಿದೆ. ಇಂತಹವನು ಅಲ್ಲಾಹನ ಇಬಾದತ್ ಮಾಡುವುದು ಮತ್ತು ಅವುಗಳ ಮೂಲಕ ಅವನನ್ನು ಮಾತ್ರ ನಿರೀಕ್ಷಿಸುವುದು ಮೊದಲಾದ ಅಲ್ಲಾಹು ಇಷ್ಟಪಡುವ ಎಲ್ಲ ಕರ್ಮಗಳನ್ನು ಪೂರ್ಣ ಸಂತೃಪ್ತಿಯೊಂದಿಗೇ ಮಾಡುತ್ತಾನೆ.

ಅಲ್ಲಾಹನ ರುಬೂಬಿಯ್ಯತ್‌ನಲ್ಲಿರುವ ಸಂತೃಪ್ತಿಯು ತನ್ನ ದಾಸನಿಗಿರುವ ಅಲ್ಲಾಹನ ಕಾರ್ಯ ನಿಯಂತ್ರಣದಲ್ಲಿರುವ ಸಂತೃಪ್ತಿಯನ್ನು ಒಳಗೊಂಡಿದೆ. ಅಲ್ಲಾಹನ ಮೇಲೆ ಮಾತ್ರ ತವಕ್ಕುಲ್ ಮಾಡುವುದು, ಅವನೊಂದಿಗೆ ಮಾತ್ರ ಸಹಾಯ ಯಾಚನೆ ಮಾಡುವುದು, ಅವನಲ್ಲಿ ಮಾತ್ರ ಭರವಸೆಯನ್ನಿಡುವುದು, ಮತ್ತು ಅವನ ಮೇಲೆ ಮಾತ್ರ ಅವಲಂಬಿತನಾಗುವುದನ್ನು ಇದು ಒಳಗೊಂಡಿದೆ. ಇಂತಹವನು ತಾನು ಮಾಡುವ ಎಲ್ಲ ಕರ್ಮಗಳಲ್ಲೂ ಸಂಪೂರ್ಣ ಸಂತೃಪ್ತನಾಗಿರಬೇಕು.

ಆದ್ದರಿಂದ ಮೊದಲನೆಯದು ಅಲ್ಲಾಹು ಆಜ್ಞಾಪಿಸಿದ ವಿಷಯಗಳಲ್ಲಿರುವ ಸಂತೃಪ್ತಿಯನ್ನು ಒಳಗೊಂಡಿದೆ ಮತ್ತು ಎರಡನೆಯದು ಅವನು ತನ್ನ ದಾಸನ ಮೇಲೆ ವಿಧಿಸುವ ವಿಷಯಗಳಲ್ಲಿರುವ ಸಂತೃಪ್ತಿಯನ್ನು ಹೊಂದಿದೆ.

ಜನರಲ್ಲಿ ಹೆಚ್ಚಿನವರೂ ಅಲ್ಲಾಹನನ್ನು ರಬ್ಬ್ ಆಗಿ ತೃಪ್ತಿಪಟ್ಟಿರುತ್ತಾರೆ, ಅವನ ಹೊರತಾದ ಒಬ್ಬ ರಬ್ಬ್‌ನನ್ನು ಅವರು ಇಚ್ಛಿಸುವುದಿಲ್ಲ. ಆದರೆ ರಕ್ಷಕನನ್ನಾಗಿ ಹಾಗೂ ಸಹಾಯಕನನ್ನಾಗಿ ಅವರು ಅವನಲ್ಲಿ ಮಾತ್ರ ತೃಪ್ತರಾಗುವುದಿಲ್ಲ. ಬದಲಾಗಿ ಅವನ ಹೊರತಾಗಿರುವ ರಕ್ಷಕರೊಂದಿಗೆ ಅವರು ಮಿತ್ರತ್ವವನ್ನು ತೋರುತ್ತಾರೆ. ಯಾಕೆಂದರೆ ಆ ರಕ್ಷಕರು ತಮ್ಮನ್ನು ಅಲ್ಲಾಹನೆಡೆಗೆ ಸಮೀಪಗೊಳಿಸುತ್ತಾರೆ ಮತ್ತು ಆ ರಕ್ಷಕರೊಂದಿಗೆ ಮಿತ್ರತ್ವ ತೋರುವುದು ಒಬ್ಬ ರಾಜನ ಸಾಮೀಪ್ಯವನ್ನು ಪಡೆದವರೊಂದಿಗೆ ಮಿತ್ರತ್ವ ತೋರುವಂತೆಯಾಗಿದೆ ಎಂದು ಅವರು ಭಾವಿಸುತ್ತಾರೆ. ಶಿರ್ಕ್ ಎಂಬುದು ಇದೇ ಆಗಿದೆ. ಬದಲಾಗಿ ತೌಹೀದ್ ಏನೆಂದರೆ ಅಲ್ಲಾಹನ ಹೊರತು ಯಾರನ್ನೂ ರಕ್ಷಕರನ್ನಾಗಿ ಮಾಡಿಕೊಳ್ಳದಿರುವುದು. ಮುಶ್ರಿಕ್‌ಗಳು ಅಲ್ಲಾಹೇತರರನ್ನು ರಕ್ಷಕರನ್ನಾಗಿ ಮಾಡಿಕೊಂಡಿದ್ದರೆಂಬುದನ್ನು ಕುರ್‌ಆನ್‌ನಾದ್ಯಂತ ವಿವರಿಸಲಾಗಿದೆ.

ಆದರೆ ಅಂಬಿಯಾಗಳೊಂದಿಗೆ, ರಸೂಲರೊಂದಿಗೆ ಮತ್ತು ವಿಶ್ವಾಸಿಗಳಾದ ಅಲ್ಲಾಹನ ದಾಸರೊಂದಿಗೆ ಮಿತ್ರತ್ವ ತೋರುವುದಕ್ಕೆ ಇದು ವಿರುದ್ಧವಾಗುವುದಿಲ್ಲ. ಬದಲಾಗಿ ಇದು ಈಮಾನ್‌ನ ಪೂರ್ತೀಕರಣದಲ್ಲಿ ಮತ್ತು ಅಲ್ಲಾಹನೊಂದಿಗೆ ಮಿತ್ರತ್ವ ತೋರುವುದರಲ್ಲಿ ಒಳಗೊಂಡದ್ದಾಗಿದೆ. ಆದ್ದರಿಂದ ಅಲ್ಲಾಹನ ಸ್ನೇಹಿತರೊಂದಿಗೆ ಮಿತ್ರತ್ವ ತೋರುವುದು ಮತ್ತು ಅಲ್ಲಾಹನ ಹೊರತಾದವರನ್ನು ರಕ್ಷಕರನ್ನಾಗಿ ಮಾಡಿಕೊಳ್ಳುವುದು ಎರಡೂ ಬೇರೆ ಬೇರೆ ಸಂಗತಿಗಳಾಗಿವೆ. ಇವೆರಡರ ನಡುವೆಯಿರುವ ವ್ಯತ್ಯಾಸವನ್ನು ಯಾರಾದರೂ ಅರಿಯದಿದ್ದಲ್ಲಿ ಅವನು ತೌಹೀದನ್ನು ಅದರ ಮೂಲದಿಂದಲೇ ಕಲಿಯಬೇಕಾದ ಆವಶ್ಯಕತೆಯಿದೆ. ಯಾಕೆಂದರೆ ಈ ವಿಷಯವು ತೌಹೀದ್‌ನ ಮೂಲ ಮತ್ತು ಅಡಿಪಾಯವಾಗಿದೆ.

ಜನರಲ್ಲಿ ಹೆಚ್ಚಿನವರೂ ಅಲ್ಲಾಹೇತರರೆಡೆಗೆ ತೀರ್ಪನ್ನು ಅರಸುತ್ತಾ ಸಾಗುವ ಮೂಲಕ ಅಲ್ಲಾಹೇತರರನ್ನು ತೀರ್ಪುಗಾರರನ್ನಾಗಿ ಮಾಡಿಕೊಳ್ಳುತ್ತಾರೆ ಮತ್ತು ಅವರು ನೀಡುವ ತೀರ್ಪಿನಲ್ಲಿ ಸಂತೃಪ್ತರಾಗುತ್ತಾರೆ. ಈ ಮೂರು ವಿಷಯಗಳು –ಅಂದರೆ ಅಲ್ಲಾಹನ ಹೊರತು ಅನ್ಯರನ್ನು ರಬ್ಬ್ ಆಗಿ ಮಾಡಿಕೊಳ್ಳದಿರುವುದು, ಇಲಾಹ್ ಆಗಿ ಮಾಡಿಕೊಳ್ಳದಿರುವುದು ಮತ್ತು ತೀರ್ಪುಗಾರರನ್ನಾಗಿ ಮಾಡಿಕೊಳ್ಳದಿರುವುದು– ತೌಹೀದ್‌ನ ಸ್ಥಂಭಗಳಾಗಿವೆ.

ಅಲ್ಲಾಹನ ಪ್ರವಾದಿ ಮುಹಮ್ಮದ್(ﷺ)ರವರನ್ನು ರಸೂಲ್ ಆಗಿ ತೃಪ್ತಿಪಡುವುದರಲ್ಲಿ ಅವರಿಗೆ ಸಂಪೂರ್ಣ ವಿಧೇಯರಾಗುವುದು, ಅವರಿಗೆ ಅನಿರ್ಬಂಧಿತವಾದ ರೀತಿಯಲ್ಲಿ ಶರಣಾಗುವುದು ಒಳಗೊಂಡಿದೆ. ಅಂದರೆ ತನ್ನ ಶರೀರಕ್ಕಿಂತಲೂ ಹೆಚ್ಚು ಅವರಿಗೆ ಆದ್ಯತೆ ನೀಡುವುದು, ಅವರ ವಚನಗಳಿಂದಲೇ ಹೊರತು ಮಾರ್ಗದರ್ಶನ ಪಡೆಯದಿರುವುದು, ಅವರ ಕಡೆಯಿಂದಲ್ಲದೆ ತೀರ್ಪನ್ನು ಹುಡುಕದಿರುವುದು, ಅವರ ಹೊರತಾದವರನ್ನು ತೀರ್ಪುಗಾರರನ್ನಾಗಿ ಮಾಡದಿರುವುದು ಮತ್ತು ಅವರ ಹೊರತಾದವರು ನೀಡುವ ತೀರ್ಪನ್ನು –ಅದು ಅಲ್ಲಾಹನ ನಾಮ, ವಿಶೇಷಣ ಅಥವಾ ಕ್ರಿಯೆಗಳ ವಿಷಯದಲ್ಲಾಗಿರಲಿ, ಅಥವಾ ಈಮಾನ್‌ನ ವಾಸ್ತವತೆಯನ್ನು ಮತ್ತು ಸ್ಥಾನವನ್ನು ಆಸ್ವಾದಿಸುವ ವಿಷಯದಲ್ಲಾಗಿರಲಿ, ಅಥವಾ ಆಂತರಿಕ ಮತ್ತು ಬಾಹ್ಯ ನಿಯಮಗಳ ವಿಷಯದಲ್ಲಾಗಿರಲಿ– ಯಾವುದರಲ್ಲೂ ಅವರ ಹೊರತಾದವರು ನೀಡುವ ತೀರ್ಪಿಗೆ ಸ್ವಲ್ಪವೂ ಸಂತೃಪ್ತಿಯನ್ನು ತೋರಿಸದಿರುವುದು ಮತ್ತು ಪ್ರವಾದಿ(ﷺ)ಯವರು ನೀಡುವ ತೀರ್ಪಿಗೆ ಮಾತ್ರ ಸಂತೃಪ್ತಿಯನ್ನು ತೋರಿಸುವುದು.

ಅಲ್ಲಾಹನ ದೀನ್‌ನಲ್ಲಿ ತೃಪ್ತಿಪಡುವುದು ಹೇಗೆಂದರೆ ಆ ದೀನ್ ಏನು ಹೇಳುತ್ತದೋ, ಏನು ತೀರ್ಪು ನೀಡುತ್ತದೋ, ಏನು ಆಜ್ಞಾಪಿಸುತ್ತದೋ, ಏನನ್ನು ವಿರೋಧಿಸುತ್ತದೋ ಅವೆಲ್ಲದರ ಬಗ್ಗೆಯೂ ತೃಪ್ತಿಯನ್ನು ಹೊಂದುವುದಾಗಿದೆ. ಅದು ನೀಡುವ ತೀರ್ಪಿನ ಬಗ್ಗೆ ಹೃದಯದಲ್ಲಿ ಯಾವುದೇ ಪ್ರಯಾಸವೂ ಇಲ್ಲದೆ ಅದಕ್ಕೆ ಸಂಪೂರ್ಣ ಶರಣಾಗುವುದು. ಅದು ಅವನ ಮನಸ್ಸಿನ ಬಯಕೆಗೆ ಅಥವಾ ಮನದಿಂಗಿತಕ್ಕೆ, ಅಥವಾ ತಾನು ತಕ್ಲೀದ್ ಮಾಡುವವನಿಗೆ ಅಥವಾ ತನ್ನ ಶೈಖ್‌ಗೆ ಮತ್ತು ತನ್ನ ಗುಂಪಿಗೆ ವಿರುದ್ಧವಾಗಿದ್ದರೂ ಸಹ.

ಇವೆಲ್ಲವನ್ನೂ ಪಾಲಿಸಿದರೆ ಜಗತ್ತಿನಲ್ಲಿ ಜನರು ನಿನ್ನನ್ನು ಏಕಾಂಗಿಯಾಗಿ ಬಿಟ್ಟುಬಿಡುವರು. ಆದ್ದರಿಂದ ಆ ಏಕಾಂಗಿತನದ ಬಗ್ಗೆ ನೀನು ಎಂದಿಗೂ ಭಯಪಡಬಾರದು. ಯಾಕೆಂದರೆ ಅಲ್ಲಾಹನ ಮೇಲಾಣೆ, ಇರ್ಟುತ್ ಎಂಬುದು ಇದೇ ಆಗಿದೆ. ಇದು ಅಲ್ಲಾಹನೊಂದಿಗೆ ಮತ್ತು ಅವನ ರಸೂಲರೊಂದಿಗಿರುವ ಒಡನಾಟವಾಗಿದೆ. ಇದು ಅಲ್ಲಾಹನನ್ನು ರಬ್ಬ್ ಆಗಿ ತೃಪ್ತಿಪಡುವುದಾಗಿದೆ, ಮುಹಮ್ಮದ್(ﷺ)ರವರನ್ನು ರಸೂಲ್ ಆಗಿ ತೃಪ್ತಿಪಡುವುದಾಗಿದೆ ಮತ್ತು ಇಸ್ಲಾಮನ್ನು ದೀನ್ ಆಗಿ ತೃಪ್ತಿಪಡುವುದಾಗಿದೆ.

ಆದರೆ ಸತ್ಯವೇನೆಂದರೆ, ಒಬ್ಬ ವ್ಯಕ್ತಿ ಈ ಏಕಾಂಗಿತನದ ಸ್ಪರ್ಶವನ್ನು ಅನುಭವಿಸಿದಾಗ ಮತ್ತು ಅದರ ರುಚಿಯನ್ನು ಆಸ್ವಾದಿಸಿದಾಗ ಅವನ ಆತ್ಮವು ಉಸಿರಾಡತೊಡಗುತ್ತದೆ. ಅವನು ಹೇಳುತ್ತಾನೆ: ಓ ಅಲ್ಲಾಹ್! ನನಗೆ ಏಕಾಂಗಿತನವನ್ನು ಮತ್ತು ನಿನ್ನೊಂದಿಗಿರುವ ಉಲ್ಲಾಸವನ್ನು ಹೆಚ್ಚಿಸಿಕೊಡು. ಅವನು

ಈ ಏಕಾಂಗಿತನದ ರುಚಿಯನ್ನು ಆಸ್ವಾದಿಸುವಾಗಲೆಲ್ಲ ಜನರೊಂದಿಗೆ ಉಲ್ಲಾಸದಿಂದಿರುವುದೇ ನಿಜವಾದ ಏಕಾಂಗಿತನವಾಗಿದೆ, ಜನರ ನಡುವೆ ಇಝ್ಝತ್ ಪಡೆಯುವುದೇ ನಿಜವಾದ ದಿಲ್ಲತ್ (ಅಪಮಾನ) ಆಗಿದೆ, ಜನರ ಅಭಿಪ್ರಾಯಗಳೊಂದಿಗೆ ಮತ್ತು ಅವರ ಮೆದುಳುಗಳಿಂದ ಬರುವ ಕಸಗಳೊಂದಿಗೆ ನಿಲ್ಲುವುದೇ ನಿಜವಾದ ಅವಿವೇಕತನವಾಗಿದೆ ಮತ್ತು ಅವರ ಆಚಾರ ಹಾಗೂ ಸಂಪ್ರದಾಯಗಳೊಂದಿಗೆ ತನ್ನನ್ನು ಬಂಧಿಸಿಕೊಳ್ಳುವುದೇ ನಿಜವಾದ ಬೇರ್ಪಡುವಿಕೆಯಾಗಿದೆ ಎಂಬುದನ್ನು ಅರಿತುಕೊಳ್ಳುವನು. ಆದ್ದರಿಂದ ಅಲ್ಲಾಹನಿಂದ ತನಗೆ ಸಿಗುವ ಪಾಲಿನಲ್ಲಿ ಅವನು ಸೃಷ್ಟಿಗಳಲ್ಲಿ ಯಾರಿಗೂ ಆದ್ಯತೆ ನೀಡಲಾರನು. ನಷ್ಟವನ್ನಲ್ಲದೆ ಇನ್ನಾವುದೇ ಪ್ರಯೋಜನವನ್ನು ನೀಡದಿರುವ ವಿಷಯಗಳಲ್ಲಿ ಅವರೊಂದಿಗೆ ಸಹಮತ ಪ್ರಕಟಿಸುವ ಮೂಲಕ ಅಲ್ಲಾಹನಿಂದ ತನಗೆ ಸಿಗುವ ಸೌಭಾಗ್ಯವನ್ನು ಅವನು ಮಾರಾಟ ಮಾಡಲಾರನು.

ಸಂಬಂಧಗಳು ಕಡಿದು ಹೋದಾಗ, ವಾಸ್ತವತೆಗಳು ನಿಜವಾದಾಗ, ಗೋರಿಗಳಲ್ಲಿರುವುದನ್ನು ಬುಡಮೇಲುಗೊಳಿಸಿ ಹೊರತರಲಾದಾಗ, ಹೃದಯಗಳಲ್ಲಿರುವುದನ್ನು ಬಹಿರಂಗಗೊಳಿಸಲಾದಾಗ, ರಹಸ್ಯಗಳನ್ನು ಪರೀಕ್ಷಿಸಲಾದಾಗ, ಯಾವುದೇ ಶಕ್ತಿಯನ್ನಾಗಲಿ, ಸಹಾಯಕರನ್ನಾಗಲಿ ಕಾಣಲಾಗದೇ ಹೋದಾಗ, ಅಂದು ಮನುಷ್ಯನಿಗೆ ಲಾಭ ಮತ್ತು ನಷ್ಟಗಳ ಸ್ಪಷ್ಟ ಅರಿವಾಗುವುದು, ತನ್ನ ಮೀಝಾನ್ ಯಾವುದರಿಂದ ಹಗುರವಾಗುತ್ತದೆ ಮತ್ತು ಯಾವುದರಿಂದ ಭಾರವಾಗುತ್ತದೆ ಎಂಬುದರ ಅರಿವಾಗುವುದು.

ಸಹಾಯ ಬೇಡಲಾಗುವವನು ಅಲ್ಲಾಹನಾಗಿದ್ದಾನೆ. ಭರವಸೆಯಿಡಬೇಕಾದವನೂ ಅವನೇ ಆಗಿದ್ದಾನೆ.

[ಮದಾರಿಜು ಸ್ಸಾಲಿಕೀನ್ 2/170–172]

وَصَلَّى اللهُ وَسَلَّمَ عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

IslamHouse.com